ಶ್ರೀ ಕಡಿದಾಳ್ ಮಂಜಪ್ಪ.—ಕಾಲುವೆ ಮತ್ತು ಮಡಬಾಯಿ ರಿಪೇರಿಯಾಗಿವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕೆಲಸ ಮಾಡದೆ ಖರ್ಚು ಹಾಕಿದ್ದಾರೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೋದಸಾರಿ annual repairs ಬಗ್ಗೆ ಖರ್ಚಾಗಿಲ್ಲವೆಂದು ಹೇಳಿದ್ದರು. ಪುನಃ enquiry ಮಾಡಿ ರಿಪೋರ್ಟ್ ತರಿಸಿಕೊಂಡು, ರಿಪೋರ್ಟಿನ ವಿದ್ಯಮಾನವನ್ನು ಕಾಗದದಲ್ಲಿ ಬರೆದ 'ಕಾಲುವೆಗೆ ಅಲ್ಲ' 'ಕಟ್ಟೆ ರಿಪೇರಿ ಬಗ್ಗೆ' ಎಂದು ತಿಳಿಸಿದ್ದೇವೆ.

Anecut across Dandavathi River near Kuppagaddi, Sorab Taluk.

*Q.—877 Sri MALLIKARJUNAPPA GOWDA (Sorab—Shikaripur).—

Will the Government be pleased to state:—

(*a*) the year in which an estimate has been prepared for the construction of an anecut across the Dandavathi River near Kuppagaddi in Sorab Taluk;

(*b*) the amount of the estimate;

(*c*) the extent of land and the number of villages that will get irrigational facilities by this project (information in respect of dry and wet lands to be furnished);

(*d*) the reason for not yet starting the works ?

A.—Sri Kadidal MANJAPPA (Minister for Revenue and Public Works).—

(*a*) The original estimate was prepared in 1949. It is now being revised.

(*b*) About Rs. 42 lakhs.

(*c*) Out of a total irrigable area of 8,000 acres, 4,500 acres are tank-fed wet, 500 acres rain-fed wet and 3,000 acres are dry lands.

(*d*) The work has yet to receive sanction.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈ ಕಾಂಗಾರಿಯನ್ನು ಯಾವಾಗ ಮುಂಜೂರು ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಯೋಚನೆ ಮಾಡಿದ್ದೇವೆ.

Bridge on Varada River in Sorab-Jade Road (Construction).

Q.—878 Sri MALLIKARJUNAPPA GOWDA (Sorab-Shikaripur).—

Will the Government be pleased to state:—

(*a*) the year in which the construction of a bridge to Varada River in Sorab-Jade Road in Sorab Taluk has been sanctioned;

(*b*) the amount of the original estimate;

(*c*) the amount spent annually so far;

(*d*) the time by which the work may be completed ?

A.—Sri Kadidal MANJAPPA (Minister for Revenue and Public Works).—

(*a*) In April 1947.

(*b*) Rs. 2,92,000.

(*c*)—

		Rs.	a.	p.
1948-49	...	62,640	12	0
1949-50	...	33,020	13	0
1950-51	...	67,232	9	0
1951-52	...	41,453	15	5
1952-53	...	30,658	8	3
1953-54	...	39,601	8	0
1954-55	...	23,611	13	0
		2,98,219	14	8

(*d*) By March 1956.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—9 ವರ್ಷಗಳಾಗಿದೆಯಲ್ಲಾ, ಇಷ್ಟುವರ್ಷ ನುಸ್ತಿಯಾಗಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರದೇಶ ಮಲೆನಾಡಾಗಿರುವುದೇ ಮೂಲಕಾರಣ. ಕಂಟ್ರಾಕ್ಟರುಗಳು ಜಾಗ್ರತೆ ಕೆಲಸಮಾಡದಿರುವುದು, ಸಾಮಾನುಗಳು ವಗೈರೆ ಸಿಕ್ಕದಿರುವುದು ಇನ್ನೊಂದು ಕಾರಣ. ಈಗ ಕೆಲಸ ಬಹಳಮಟ್ಟಿಗೆ ಮುಗಿದಿದೆ. ಇನ್ನು ನಾಲ್ಕೈದು ತಿಂಗಳೊಳಗೆ ಮುಗಿಯಬಹುದೆಂಬ ನಿರೀಕ್ಷೆಯಿದೆ.

Alalasandra Venkatapura Tank in Koratagere Taluk (Restoration).

Q.—910. Sri R. MUDDURAMIAH (Koratagere-Madhugiri).—

Will the Government be pleased to state:—

(*a*) whether estimates have been prepared for the restoration of Alalasandra Venkatapura tank in the Koratagere Taluk;

(*b*) if so, when this tank work will be started ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) After the estimate is sanctioned.

ಶ್ರೀ ಆರ್. ಮುದ್ದುರಾಮಯ್ಯ.—ಈ ಕೆರೆಗೆ ತಯಾರಾಗಿರತಕ್ಕ ಅಂದಾಜು ಮೊಬಲಗು ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಲಕ್ಷ ಐವತ್ತು ನಾಲ್ಕು ಸಾವಿರ.

ಶ್ರೀ ಆರ್. ಮುದ್ದುರಾಮಯ್ಯ.—ಈ ಕೆರೆಯ ಕೆಲಸವನ್ನು ಕೈಗೆದುಕೊಳ್ಳುವುದರಿಂದ ಆ ಪ್ರದೇಶದ ಜನರಿಗೆ ಎಷ್ಟು ಅನುಕೂಲವಾಗುತ್ತದೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—162 ಎಕರೆ ಜಮೀನು ಮಾಲೀಕರಿಗೆ ಅನುಕೂಲವಾಗುತ್ತದೆ.

ಶ್ರೀ ಆರ್. ಮುದ್ದುರಾಮಯ್ಯ.—ಜಾಗ್ರತೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Irrigation Enquiry ನಡೆಯುತ್ತಿದೆ. Enquiry ಆಗಿ ಎಸ್ಟಿಮೇಟ್ ಬಂದ ನಂತರ ಮಾಡುತ್ತೇವೆ.

Coir Industry in Kellodu in Hosadurga Taluk.

Q.—768. **Sri G. BASAPPA** (Hosadurga).—

Will the Government be pleased to state—

(*a*) whether they had promised to start coir industry at Kellodu in Hosadurga Taluk;

(*b*) the action taken in the matter ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) The starting of the Centre has already been sanctioned. As a building for locating the Centre was not readily available, an estimate for constructing a new building for the purpose has also been sanctioned. A site has been selected and action is being taken to put up the building and also to purchase the necessary equipment and appoint the required staff.

ಶ್ರೀ ಜಿ. ಬಸಪ್ಪ.—ಈ ಅಂದಾಜು ಮಂಜೂರಾಗಿ ಈಗಾಗಲೇ ಎಷ್ಟು ವರ್ಷವಾಯಿತು ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ದಿವಸಗಳ ಕೆಳಗೆ.

ಶ್ರೀ ಜಿ. ಬಸಪ್ಪ.—ಕಳೆದ ಬಡ್ಜೆಟ್ ಅಧಿವೇಶನದಲ್ಲಿ 2,000 ಚಿಲ್ಲರೆ ಮೊಬಲಗಿಗೆ ಅಂದಾಜು ಮಂಜೂರಾಗಿ ಸ್ಕೆಟ್ ಇಲ್ಲದೆ ಕೆಲಸ ನಿಧಾನವಾಗಿದೆಯೆಂದು ಹೇಳಿದ್ದಿರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಕ್ಟಿಸಿಷ್ಟ್ ಗಲಾಟೆ ಇತ್ತು. ಈಗ ಅಕ್ಟಿಸಿಷ್ಟ್ ಕ್ರಮ ಆಗಿದೆ. ಕೆಲಸ ಬೇಗ ತೆಗೆದುಕೊಳ್ಳುತ್ತಾರೆ.

Sri G. BASAPPA.—Action is being taken to put up the building and also to purchase the necessary equipment and appoint the required staff ಎಂದು ಹೇಳಿದ್ದೀರಿ. ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ ; ಬೇಗ ಮಾಡುತ್ತೇವೆ.

ಶ್ರೀ ಬಿ. ಚಿಕ್ಕಣ್ಣ.—ಈ ಕೈಗಾರಿಕೆಗೆ ಅವಶ್ಯಕವಾದ ಯಂತ್ರೋಪಕರಣಗಳಿಗೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್ ಸಿದ್ದವೀರಪ್ಪ.—ಬಿಲ್ಡಿಂಗ್ ಆದಮೇಲೆ ಮಾಡುತ್ತೇವೆ. It is a test pilot plant, ಅದಕ್ಕೆ ಬೇರೆ ಸರ್ವೆ ನಡೆಯುತ್ತಿದೆ.

ಶ್ರೀ ಬಿ. ಚಿಕ್ಕಣ್ಣ.—Coir Industry ಬೋರ್ಡಿನಿಂದ ರಿಪೋರ್ಟ್ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—Coir Industryಗೆ ಹಿರಿಯೂರು ತಾಲ್ಲೂಕು ಲಾಯಖ್ಖಾಗಿದೆಯೆಂದು ಹೇಳಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಒಂದೆರಡು ಕಡೆ Cocoanut Committeeಯವರು ಹೇಳಿದರು, ಮೈಸೂರಿನಲ್ಲಿ ಸೌಕರ್ಯಗಳು ಸಾಲದು ಎಂದು. ಈಗ test plant ಹಾಕಿ ನೋಡುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯ.—ಕೇಂದ್ರ ಸರ್ಕಾರದವರು ಇದನ್ನು ಸರ್ವೆಮಾಡಿ ನೋಡಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ದೇಶದ ಎಲ್ಲಾ ಕಡೆಯಲ್ಲೂ ಮಾಡುತ್ತಿದ್ದಾರೆ. ಈಗ ಒಂದು definite Scheme ಪ್ರಕಾರ ಹೊನ್ನಾವರ್ಗ ತಿಪಟೂರು ಗಳಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ಅದನ್ನು ನೋಡಬೇಕು.

ಶ್ರೀ ಟಿ. ಹನುಮಯ್ಯ.—ಹಿರಿಯೂರು ತಾಲ್ಲೂಕಿನಲ್ಲಿ ಸ್ಥಾಪನೆ ಮಾಡಿದರೆ ಯಶಸ್ವಿಯಾಗಿ ನಡೆಯತ್ತದೆಂದು ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಆಲೋಚನೆ ಮಾಡೋಣ. ಒಂದೆರಡು ಕಡೆ successful ಆದರೆ ನೋಡೋಣ.

ಶ್ರೀ ವಿ. ಮಸಿಯಪ್ಪ.—ಹಿರಿಯೂರು ತಾಲ್ಲೂಕಿನಲ್ಲಿ Coir Industryಯನ್ನು Small scale ನಲ್ಲಿ ಷುರು ಮಾಡಬೇಕೆಂದು ಹೇಳಿ ಇಲಾಖೆಯ ಪರಿಣತರು ಬಂದು ಸರ್ವೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—I believe this question refers only to Hosadurga.

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿದ್ದಾರೆ. ಮತ್ತು ಅವರು ಕೊಟ್ಟಿರುವ proposalsನಲ್ಲಿ, Coir Industryಯು ಫಲಪ್ರದವಾಗಿ ನಡೆಯಬೇಕಾದರೆ Water facilities ಸರಿಯಾಗಿರಬೇಕೆಂದು ಹೇಳುತ್ತಿದ್ದಾರೆ. ಅದರಮೇಲೆ Testಗಾಗಿ Cottage Industry basis ಮೇಲೆ ಮೊದಲು ಹೊನ್ನಾವರ್ಗ ಅಮೇಲೆ ತಿಪಟೂರಿನಲ್ಲಿ ಮಾಡಬೇಕೆಂದಿದ್ದೇವೆ.